**ಓ ಎಸ್ ನಂಃ 264-15**
**ಪಿ ಡಬ್ಲ್ಯೂ ಃ 1**

**ದಿಃ 05-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 9 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ**

1. ನಾನು ಬಿಎಸ್‌ಸಿ ವರೆಗೂ ಓದಿದ್ದು ಆದರೆ ಮುಗಿಸಿರುವುದಿಲ್ಲ. ನಾನು ಬೆಳಗುಂಬದಲ್ಲಿ ವಾಸವಿದ್ದೇನೆ. 1 ಮತ್ತು 4 ನೇ ವಾದಿ ತಮ್ಮ ಪರವಾಗಿ ಸಾಕ್ಷಿ ಹೇಳಲು ನನಗೆ ದಾಖಲೆ ಕೊಟ್ಟಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1, 2 ಮತ್ತು 4 ನೇ ವಾದಿಗಳು ತಮ್ಮ ಪರವಾಗಿ ಸಾಕ್ಷಿ ಹೇಳಲು ನನಗೆ ದಾಖಲೆ ಕೊಟ್ಟಿಲ್ಲ. ನಾನು ದಿನಾಂಕಃ 16.06.1966 ರಲ್ಲಿ ಜನಿಸಿರುತ್ತೇನೆ. ನಾನು ದಾವಾ ಆಸ್ತಿಗಳನ್ನು ನೋಡಿರುತ್ತೇನೆ. ನನ್ನ ತಂದೆಗೆ ನಾಲ್ಕು ಜನ ಸಹೋದರರು. ನಾವು ಎಲ್ಲಾ ದಾವಾ ಆಸ್ತಿಗಳಲ್ಲಿ ಅನುಭವ ಹೊಂದಿರುತ್ತೇವೆ. ನಾನು ಸ.ನಂ. 76/2, ಸ.ನಂ.49, ಸ.ನಂ.41/2, ಸ.ನಂ. 42/2, ಸ.ನಂ.19/1, ಸ.ನಂ.19/2, ಸ.ನಂ. 15/3 ಎ, ಸ.ನಂ. 68/1 ರ ಸ್ವಾಧೀನತೆಯನ್ನು ಹೊಂದಿರುತ್ತೇನೆ.

2. 9 ರಿಂದ 11 ನೇ ಪ್ರತಿವಾದಿಗಳು ಸ.ನಂ. 49, ಸ.ನಂ.24, ಸ.ನಂ.25/1, ಸ.ನಂ.25/2, ಸ.ನಂ.27/1, ಸ.ನಂ.36, ಸ.ನಂ.67 ಅಥವಾ 69 ರ ಸ್ವಾಧೀನತೆಯನ್ನು ಹೊಂದಿರುತ್ತಾರೆ. ನಾವು ದಿನಾಂಕಃ28.04.1988 ರ ಪಂಚಾಯತ್ ಪಾರಿಕತ್ ನ ಆಧಾರದ ಮೇಲೆ ನಾವು ದಾವಾ ಆಸ್ತಿಗಳ ಸ್ವಾಧೀನತೆಯನ್ನು ಹೊಂದಿರುತ್ತೇವೆ ಅಂದರೆ ಸರಿಯಲ್ಲ. ದಿನಾಂಕಃ 28.04.1988 ರಲ್ಲಿ ನಮ್ಮಗಳ ಮದ್ಯೆ ಪಂಚಾಯತ್ ಪಾರಿಕತ್ ಆಗಿರುತ್ತದೆ ಅಂದರೆ ಸರಿಯಲ್ಲ. ದಿನಾಂಕಃ28.04.2006 ರಲ್ಲಿ ನಮ್ಮಗಳ ಮದ್ಯೆ ಇನ್ನೊಂದು ಪಂಚಾಯತ್ ಪಾರಿಕತ್ ಆಗಿರುತ್ತದೆ ಅಂದರೆ ಸರಿಯಲ್ಲ. ನಾನು ಸ.ನಂ.44/1 ರ 20 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನೆ ಅಂದರೆ ನನಗೆ ಸ.ನಂ ಗೊತ್ತಿಲ್ಲ ಆದರೆ ಅಡಿಕೆ ತೋಟದ ಸ್ವಾಧೀನತೆ ಹೊಂದಿರುತ್ತೇನೆ ಎಂದು ಹೇಳುತ್ತಾರೆ. ಆ ಆಸ್ತಿ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ನಿಜ. ಆ ಆಸ್ತಿಯಲ್ಲಿ ಭಾಗ ಮಾಡಲು ನನ್ನದು ತಕರಾರು ಇರುವುದಿಲ್ಲ.

3. 1988 ರಲ್ಲಿ ಭಾಗ ಆಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ಭಾಗ ಆಗಲು ನನ್ನದು ತಕರಾರು ಇರುವುದಿಲ್ಲ. ನನ್ನ ತಂದೆ ಅವರು ಹೇಳಿದ ಹಾಗೆ ನಾನು ಆಸ್ತಿಗಳ ವ್ಯವಸಾಯ ಮಾಡುತ್ತಾ ಬಂದಿರುತ್ತೇನೆ. ಮೇಲೆ ಹೇಳಿದ ಎರಡೂ ಪಂಚಾಯತ್ ಪಾರಿಕತ್ ಗೆ ನನ್ನ ತಂದೆ ಒಪ್ಪಿ ಸಹಿ

ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚಾಯತ್ ಪಾರಿಕತ್ ಗಳಿಗೆ ನನ್ನ ತಂದೆ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ತಂದೆಯ ಸಹಿಯನ್ನು ಗುರುತಿಸಬಲ್ಲೆ. ನನ್ನ ತಂದೆ ಅಕ್ಷರಗಳಲ್ಲಿ ಸಹಿ ಮಾಡುತ್ತಿದ್ದು ಅವರು ಅನಕ್ಷರಸ್ಥರು ಆಗಿದ್ದರು. ನಾನು ಸ್ವಾಧೀನತೆ ಹೊಂದಿರುವ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಬರುತ್ತಿವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಒಂದು ಪಹಣಿ ಮಾತ್ರ ಬದಲಾಗಿರುತ್ತದೆ ಎಂದು ಹೇಳುತ್ತಾರೆ.

4. 9 ರಿಂದ 11 ನೇ ಪ್ರತಿವಾದಿಗಳು ತಾವು ಸ್ವಾಧೀನತೆ ಹೊಂದಿರುವ ಆಸ್ತಿಗಳು ತಮ್ಮ ತಾಯಿಯಾದ ಕಮಲಮ್ಮ ಅವರ ಹೆಸರಿನಲ್ಲಿ ಬರುತ್ತಿವೆ ಅಂದರೆ ನಿಜ. ನನ್ನ ತಂದೆ ಹೆಸರಿಗೆ ದಾವಾ ಆಸ್ತಿಗಳ ಖಾತೆಗಳು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರು ಮನೆಯ ಹಿರಿಯ ಮಗ ಆಗಿದ್ದರಿಂದ ದಾವಾ ಆಸ್ತಿಗಳ ಖಾತೆಯು ಅವರ ಹೆಸರಿಗೆ ಆಗಿರಬಹುದು. ಅದೇ ರೀತಿ ಹೊನ್ನಪ್ಪ ಮತ್ತು ರಂಗಪ್ಪ ಸಹ ಆಸ್ತಿಗಳನ್ನು ತಮ್ಮ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಅಂದರೆ ನಿಜ. ವೆಂಕಟಾಚಲಯ್ಯ ಅವರ ಭಾಗಕ್ಕೆ ಬಂದ ಆಸ್ತಿ ರಸ್ತೆಯ ಪಕ್ಕದಲ್ಲಿರುತ್ತದೆ ಎಂದರೆ ನಿಜ. ಆದ ಕಾರಣ ಆಸ್ತಿಯ ಬೆಲೆ ಜಾಸ್ತಿ ಆಗಿದ್ದರಿಂದ 9 ರಿಂದ 11 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿರುತ್ತೇನೆ ಅಂದರೆ ಸರಿಯಲ್ಲ. ವೆಂಕಟಾಚಲಯ್ಯ ಅವರು ಆಸ್ತಿಗಳ ಖಾತೆಯನ್ನು ಹೇಗೆ ಮಾಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ, ಆದ ಕಾರಣ ಖಾತೆ ಬದಲಾವಣೆಗೆ ನಾನು ತಕರಾರು ಸಲ್ಲಿಸಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ವಿಭಾಗ ಪತ್ರ ಮಾಡಿಕೊಂಡಿದ್ದರಿಂದ ಅದರ ಆಧಾರದ ಮೇರೆಗೆ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಸರಿಯಲ್ಲ.

5. ನಮ್ಮ ಭಾಗದ ಆಸ್ತಿಗಳಲ್ಲಿ ನಮಗೆ ಬೇಕಾದ ಬೆಳೆಗಳನ್ನು ಹಾಕಿದ್ದು ಪ್ರತಿವಾದಿಗಳು ತಮ್ಮ ಭಾಗದ ಆಸ್ತಿಗಳಲ್ಲಿ ತಮಗೆ ಬೇಕಾದ ಬೆಳೆಗಳನ್ನು

ಹಾಕಿರುತ್ತಾರೆ ಅಂದರೆ ನಿಜ. ಅದಕ್ಕಾಗಿ ನಾವು ಮತ್ತು ಪ್ರತಿವಾದಿಗಳು ಹಣ ಖರ್ಚು ಮಾಡಿರುತ್ತೇವೆ ಅಂದರೆ ನಿಜ. ಆದಕಾರಣ ನನಗೆ ಈಗ ಭಾಗ ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.